ಓ ಎಸ್ ನಂಃ 369/2020

ಡಿ. ಡಬ್ಲ್ಯೂ ಃ 1

ದಿಃ 20.01.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃ ವಾದಿ ಪರ ಶ್ರೀ ಎಸ್ ಜಿ ಆರ್ ವಕೀಲರಿಂದ ಃ

ನಾನು ಹಿಂದೆ ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿ ಭವಿಷ್ಯ ನಿಧಿ ನನ್ನ ವೇತನದಿಂದ ಕಡಿತ ಮಾಡಿದ ಬಗ್ಗೆ ದಾಖಲೆಗಳನ್ನು ಇಟ್ಟುಕೊಂಡಿರುವುದಿಲ್ಲ. ನಮ್ಮ ಕಂಪನಿಯವರು ಪಿ ಎಫ್ ಕಡಿತ ಮಾಡಿದ್ದರೋ ಇಲ್ಲವೋ ಎಂದು ಗೊತ್ತಿಲ್ಲ. ದಾಖಲಾತಿಯನ್ನು ತಂದುಕೊಡ್ತೀಯಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನಿ ಪಿ 1 ರಲ್ಲಿ ಇರುವ ಫೋಟೋಗಳು ಮತ್ತು ಸಹಿಗಳು ನನ್ನ ಮತ್ತು ನನ್ನ ತಾಯಿಯದ್ದು ಇರುತ್ತವೆ ಎಂದರೆ ಸರಿ. ಅದರಲ್ಲಿ ವಾದಿ ಚಂದ್ರಶೇಖರ್ ಇವರ ಫೋಟೋ ಮತ್ತು ಸಹಿ ಇವೆ ಎಂದರೆ ಸರಿ. ನಿ ಪಿ 1 ರಲ್ಲಿ ಸಾಕ್ಷಿದಾರರ ಸಹಿಗಳು ಇವೆ ಎಂದರೆ ಸರಿ. ಅದನ್ನು ಎಸ್ ವಿ ರಾಮಚಂದ್ರಯ್ಯ ಇವರು ತಯಾರಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿ ಪಿ 1 ನ್ನು ಹೊರತುಪಡಿಸಿದರೆ ಯಾವುದಾದರೂ ದಾಖಲೆ ಮಾಡಿಕೊಟ್ಟಿದ್ದಿರಾ ಎಂದರೆ ಸಾಕ್ಷಿ ನಾವು ವಾದಿಗೆ ಯಾವುದೆ ದಾಖಲೆ ಮಾಡಿಕೊಟ್ಟಿಲ್ಲ ಎಂದು ಹೇಳುತ್ತಾರೆ. ನಿ ಪಿ 1 ನ್ನು ವಾದಿ ಸೃಷ್ಟಿ ಮಾಡಿಕೊಂಡಿದ್ದಾರೆ.

ಸಬ್ ರಿಜಿಸ್ಟ್ರರ್ ಆಫೀಸ್ ಗೆ ಹೋಗಿ ಫೋಟೊ ಮತು ಹೆಬ್ಬೆಟ್ಟಿನ ರುಜು ಕೊಟ್ಟಿದ್ದೇವೆ. ಆದರೆ ಪತ್ರದಲ್ಲಿ ಏನು ಬರೆದಿದೆ ಎಂದು ನಮಗೆ ಗೊತ್ತಿಲ್ಲ. ಸಬ್ ರಿಜಿಸ್ಟ್ರರ್ ರವರು ಪತ್ರವನ್ನು ಓದಿ ಹೇಳಿ ನಮ್ಮ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಸಬ್ ರಿಜಿಸ್ಟ್ರರ್ ಇವರಿಗೆ ಪತ್ರವನ್ನು ನನಗೆ ಕೊಡಿ ನಾನು ಓದಿ ಸಹಿ ಮಾಡುತ್ತೇನೆ ಎಂದು ನಾನು ಹೇಳಿಲ್ಲ. ವಾದಿಯು ನಿ ಪಿ 5 ರಂತೆ ನಮಗೆ ನೋಟೀಸ್ ಕೊಡುವ ಮೊದಲು ನಾವು ಯಾವುದೆ ನೋಟೀಸ್ ಕೊಟ್ಟಿಲ್ಲ. ವಾದಿಯು ಕೊಟ್ಟಿದ್ದ ಚೆಕ್ ನಮ್ಮ ಖಾತೆಗೆ ಜಮಾ ಆಗಿದೆ ಎಂದರೆ ಸರಿ. ಅದನ್ನು ನಾವು ನಮ್ಮ ಕಷ್ಟಕ್ಕಾಗಿ ಉಪಯೋಗ ಮಾಡಿಕೊಂಡಿದ್ದೇವೆ ಎಂದರೆ ಸರಿ. ಚೆಕ್ ಮೂಲಕ ಕೊಟ್ಟ ಹಣ ನಮಗೆ ಉಪಯೋಗಕ್ಕೆ ಬಂದಿದೆ ಎಂದರೆ ಸರಿ. ನಿ ಪಿ 1 ನ್ನು ಬರೆದುಕೊಟ್ಟ ನಂತರ ಕ್ರಯಪತ್ರ ಬರೆದುಕೊಡಲು ನಾವು ಯಾವುದೆ ಕ್ರಮ ವಹಿಸಿಲ್ಲ ಎಂದರೆ ಸಾಕ್ಷಿ ನಾವು ಯಾವುದೆ ಕರಾರುಪತ್ರ ಬರೆದುಕೊಟ್ಟಿಲ್ಲ ಎಂದು ಹೇಳುತ್ತಾರೆ. ನಿ ಪಿ 3 ದಾವಾ ಸ್ವತ್ತಿಗೆ ಸಂಬಂಧಿಸಿದ ದಾಖಲೆ ಎಂದರೆ ಸರಿ.

ನಿ ಪಿ 1 ಮತ್ತು ನಿ ಪಿ 5 ಆಗುವ ಮದ್ಯದ ಅವಧಿಯಲ್ಲಿ ನಾವು ಇಸಿ ಯನ್ನು ತೆಗೆದುಕೊಂಡಿಲ್ಲ ಹಾಗೂ ಪತ್ರವನ್ನು ಪಡೆದಿಲ್ಲ. ನಾವು ವಾದಿಗೆ ಕರಾರುಪತ್ರ ಬರೆದುಕೊಟ್ಟ ಚೆಕ್ ಮತ್ತು ನಗದಾಗಿ ಹಣ ಪಡೆದು ಈಗ ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಪ್ರತಿವಾದಪತ್ರದಲ್ಲಿ ಏನು ಬರೆಯಿಸಿದ್ದೇವೆ ಎಂದು ಗೊತ್ತಿದೆ. ನಾವು ವಾದಿಗೆ ಪಡೆದ ಹಣಕ್ಕಾಗಿ ತಿಂಗಳಿಗೆ ಪ್ರತಿಶತ 1 ರಂತೆ ಬಡ್ಡಿ ಕೊಡುತ್ತಿದ್ದೇವು. ಈ ವಿಷಯವನ್ನು ನನ್ನ ಪ್ರತಿವಾದಪತ್ರದಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ ಎಂದರೆ ಸರಿ. ಬಡ್ಡಿ ಹಣವನ್ನು ನಾನು ಕೆ ಸಿ ನಾಗರಾಜ್ ಇವರ NEFT ಮೂಲಕ ಕಳುಹಿಸುತ್ತಿದ್ದೇನೆ. ನಾವು ಬಡ್ಡಿ ಹಣವನ್ನು ವಾದಿಗೆ ನಗದಾಗಿ ಕೊಟ್ಟಿಲ್ಲ. ವಾದಿಗೆ ಬಡ್ಡಿ ಹಣವನ್ನು NEFT ಮೂಲಕ ಅಥವಾ ನಗದಾಗಿ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ನಮ್ಮ ತಾಯಿ ವಿದ್ಯಾವಂತರು ಎಂದರೆ ಸರಿ. ನಮ್ಮ ಪ್ರತಿವಾದಪತ್ರದಲ್ಲಿ ನಾವು ಅವಿದ್ಯಾವಂತರು ಎಂದು ಸುಳ್ಳು ಬರೆಯಿಸಿದ್ದೇವೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಪತ್ರದಲ್ಲಿ ಬರೆದಿರುವುದು ನನಗೆ ಗೊತ್ತಿದೆ, ಆದರೆ ಈಗ ಕೇಳಿದ್ದು ಗೊತ್ತಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಿ ಪಿ 1 ರಲ್ಲಿ ಇರುವ ಸಹಿಗಳನ್ನು ಸಬ್ ರಿಜಿಸ್ಟ್ರರ್ ಕಚೇರಿಯಲ್ಲಿ ಮಾಡಿಸಿರುತ್ತಾರೆ. ನಿ ಪಿ 1 ನ್ನು ನಮ್ಮ ಕೈಯಲ್ಲಿ ಕೊಟ್ಟು ಸಹಿ ಪಡೆದಿದ್ದಾರೆ ಎಂದರೆ ಸರಿ. ನಿ ಪಿ 1 ನ್ನು ನಮಗೆ ಓದಲು ಬಿಡಲಿಲ್ಲ , ತರಾತುರಿಯಲ್ಲಿ ಸಹಿ ಮಾಡಿಸಿಕೊಂಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ನಿ ಪಿ 1 ನ್ನು ನಮ್ಮ ಸೂಚನೆಯ ಮೇರೆಗೆ ತಯಾರಿಸಿ ಅದನ್ನು ನಮಗೆ ಓದಿ ಹೇಳಿ ನಮ್ಮ ಕೈಯಲ್ಲಿ ಕೊಟ್ಟು ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ನಾನು ವಾದಿಯ ಬಳಿಯಲ್ಲಿ ಮಗ್ಗದಲ್ಲಿ ನೇಯ್ಗೆ ಕೆಲಸ ಮಾಡುತ್ತಿದ್ದನು. ಕೆಲಸ ಮಾಡಿದ ಬಗ್ಗೆ ವಾದಿ ನನಗೆ ಸಂಬಳ ಕೊಟ್ಟ ದಾಖಲೆಗಳು ನನ್ನ ಬಳಿ ಇಲ್ಲ. ನಾನು ಅವರ ಮಗ್ಗದಲ್ಲಿ ನೇಯ್ದು ಬಟ್ಟೆಗಳನ್ನು ತೆಗೆದುಕೊಂಡು ವ್ಯಾಪಾರ ಮಾಡಿ ಲಾಭವನ್ನು ನಾನೇ ಇಟ್ಟುಕೊಳ್ಳುತ್ತಿದ್ದೇನು ಎಂದರೆ ಸರಿಯಲ್ಲ.

ನಿ ಪಿ 1 ಆದ ನಂತರ ಮುಂದಿನ ಕ್ರಮದ ಬಗ್ಗೆ ವಾದಿಯ ಜೊತೆ ಚರ್ಚಿಸಿಲ್ಲ. ಕೆ ಸಿ ನಾಗರಾಜು ಇವರಿಗೆ ಅಸಲು ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನೋಟೀಸ್ ಕೊಟ್ಟ ನಂತರ ಕರಾರುಪತ್ರದಲ್ಲಿ ಇರುವ ಸಾಕ್ಷಿದಾರರನ್ನು ಭೇಟಿ ಆಗಿ ಆ ಪತ್ರದ ಬಗ್ಗೆ ವಿಚಾರ ಮಾಡಿಲ್ಲ. ನಿ ಪಿ 1 ನ್ನು ನಾವು ಬರೆದುಕೊಟ್ಟ ಕಾರಣ ಅವರನ್ನು ಭೇಟಿ ಮಾಡಿಲ್ಲ ಮತ್ತು ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. ಕೆ ಸಿ ನಾಗರಾಜ್ ಇವರ ವಿರುದ್ದ ಯಾವುದೆ ಕೇಸ್

ಮಾಡಿಲ್ಲ. ಆದರೆ ನೋಟೀಸ್ ಕೊಟ್ಟಿದ್ದೇವೆ. ನಿ ಪಿ 1ನ್ನು ಬರೆದುಕೊಟ್ಟ ಕಾರಣ ನಾವು ಕೆ ಸಿ ನಾಗರಾಜ್ ಇವರ ವಿರುದ್ದ ಯಾವುದೆ ಕ್ರಮ ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ಕೆ ಸಿ ನಾಗರಾಜ್ ಇವರಿಗೆ ನಿ ಪಿ 1 ರಲ್ಲಿ ಬರೆದ ಹಣವನ್ನು ಕೊಟ್ಟಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕುದೂರಿನಲ್ಲಿ ಕಟ್ಟಿರುವ ಮನೆಗೆ ಚ.ಮೀಟರ್ ಗೆ ರೂ. 4500/- ಸರ್ಕಾರಿ ಮೌಲ್ಯ ಇದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಮತ್ತು ಪ್ರತಿವಾದಪತ್ರದಲ್ಲಿ ದಾವಾ ಸ್ವತ್ತಿನ ಬೆಲೆ ರೂ.9 ಲಕ್ಷ ಇದೆ ಎಂದು ಸಬ್ ರಿಜಿಸ್ಟ್ರರ್ ಕಚೇರಿಯಲ್ಲಿ ತಿಳಿದಕೊಂಡು ಬರೆಯಿಸಿದ್ದೇವೆ. ಆ ಬಗ್ಗೆ ಯಾವುದೆ ದಾಖಲೆ ಪಡೆದಿಲ್ಲ ಮತ್ತು ಕೊಟ್ಟಿಲ್ಲ. ಬಡ್ಡಿ ಹಣವನ್ನು ಕೆ ಸಿ ನಾಗರಾಜ್ ಇವರಿಗೆ ನಗದಾಗಿ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹಣವನ್ನು ನನ್ನ ಸ್ನೇಹಿತ ಮೋಹನ್ ಇವರ ಸಮಕ್ಷಮ ಕೊಟ್ಟಿದ್ದೇನೆ. ನಾನು ಬಡ್ಡಿ ಹಣವನ್ನು ನಾಗರಾಜ್ ಇವರಿಗೆ ನಗದಾಗಿ ಅಥವಾ NEFT ಮೂಲಕ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕರಾರುಪತ್ರವನ್ನು ವಾದಿಯ ಹೆಸರಿನಲ್ಲಿ ಬರೆದುಕೊಟ್ಟು ಅಸಲು ಮತ್ತು ಬಡ್ಡಿಯನ್ನು ನಾಗರಾಜ್ ಇವರ ಹೆಸರಿನಲ್ಲಿ ಕೊಡುತ್ತಿದ್ದೇವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಕರಾರುಪತ್ರ ಬರೆದುಕೊಡಲು ನಾವು ಬಾದ್ಯರಾಗಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**